# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಲ್ಯಾಂಡ ಬ್ಯಾಂಕ ನಿರ್ಮಾಣದ ಸಲುವಾಗಿ ಅರಣ್ಯ ಇಲಾಖೆಗೆ 2.58 ಲಕ್ಷ ಹೆಕ್ಟೇರ ಸಿ ಮತ್ತು ಡಿ ವರ್ಗದ ಜಮೀನನ್ನು ಕಂದಾಯ ಇಲಾಖೆಯಿಂದ ಅರಣ್ಯ ಇಲಾಖೆಗೆ ವರ್ಗಾಯಿಸುವ ಬಗ್ಗೆ.

ಓದಲಾಗಿದೆ: 1) ಸರ್ಕಾರದ ಆದೇಶ ಸಂಖ್ಯೆ: ಆರಡಿ 106 ಎಲ್‌ಜಿಪಿ 88, ದಿನಾಂಕ 7-6-1993.

2) ಸರ್ಕಾರದ ಆದೇಶ ಸಂಖ್ಯೆ: ಆರಡಿ 106 ಎಲ್‌ಜಿಪಿ 88, ದಿನಾಂಕ 20-7-1994.

3) ಬಳ್ಳಾರಿ ಜಿಲ್ಲಾಧಿಕಾರಿಗಳ ಪತ್ರದ ಸಂಖ್ಯೆ: ಕಂ.ಭೂಮಂಜೂ: 'ಸಿ' ಮತ್ತು 'ಡಿ' 94-95, ದಿನಾಂಕ 22-12-1994.

ಂ ಂ ಂ

ಪ್ರಸ್ತಾವನೆ:

ಮೇಲೆ ಓದಲಾಗಿರುವ ಕ್ರಮಸಂಖ್ಯೆ: 1 ರ ಸರ್ಕಾರದ ಆದೇಶದಲ್ಲಿ 2.58 ಲಕ್ಷ ಹೆಕ್ಟೇರ 'ಸಿ' ಮತ್ತು 'ಡಿ' ವರ್ಗದ ಜಮೀನುಗಳನ್ನು ಕೆಲವು ಷರತ್ತುಗಳ ಮೇರೆಗೆ ಅರಣ್ಯ ಇಲಾಖೆಗೆ ಲ್ಯಾಂಡ ಬ್ಯಾಂಕ ನಿರ್ಮಿಸುವ ಸಲುವಾಗಿ, ವರ್ಗಾಯಿಸಲು ಆದೇಶ ನೀಡಲಾಗಿದ್ದು, ಸದರಿ ಷರತ್ತುಗಳನುಸಾರವಾಗಿ ಒಟ್ಟು 2.58 ಲಕ್ಷ ಹೆಕ್ಟೇರು 'ಸಿ' ಮತ್ತು 'ಡಿ' ವರ್ಗದ ಜಮೀನುಗಳ ಪೈಕಿ 1,31,866-61 ಹೆಕ್ಟೇರ ವಿಸ್ತೀರ್ಣದ ಬಗ್ಗೆ ಅರಣ್ಯ ಇಲಾಖೆಯು ನೀಡಿರುವ ಮಾಹಿತಿ ಆಧಾರದ ಮೇಲೆ ಮೊದಲನೇ ಕಂತಿನಲ್ಲಿ ಒಟ್ಟು 1,31,866-61 ಹೆಕ್ಟೇರ ವಿಸ್ತೀರ್ಣದ ಜಮೀನುಗಳನ್ನು ಕೆಲವು ಷರತ್ತುಗಳೊಡನೆ ಲ್ಯಾಂಡ ಬ್ಯಾಂಕ ನಿರ್ಮಿಸುವ ಸಲುವಾಗಿ ಕಂದಾಯ ಇಲಾಖೆಯಿಂದ ಅರಣ್ಯ ಇಲಾಖೆಗೆ ಕ್ರಮಸಂಖ್ಯೆ 2ರ ಆದೇಶದಂತೆ ವರ್ಗಾವಣೆ ಮಾಡಲಾಗಿದೆ. ಸರ್ಕಾರವು ದಿನಾಂಕ 3-5-91 ರಂದು ಅರಣ್ಯ ಇಲಾಖೆಯಿಂದ ಗಣಿಗಾರಿಕೆ ಚಟುವಟಿಕೆಗಳಿಗಾಗಿ ಅರಣ್ಯ ಪ್ರದೇಶಗಳನ್ನು ಬಿಡುಗಡೆ ಮಾಡಿದಂತಹ ಸಂದರ್ಭಗಳಲ್ಲಿ ಅದಕ್ಕೆ ಪರಿಹಾರವಾಗಿ ಅರಣ್ಯ ಇಲಾಖೆಯ ವತಿಯಿಂದ ಪರಿಹಾರಾತ್ಮಕ ನೆಡುತೋಪು ಬೆಳೆಸುವ ಉದ್ದೇಶಕ್ಕಾಗಿ 'ಸಿ' ಮತ್ತು 'ಡಿ' ವರ್ಗದ ಜಮೀನುಗಳನ್ನು ಲ್ಯಾಂಡ ಬ್ಯಾಂಕನಿಂದ ಬಿಡುಗಡೆ ಮಾಡಿ ಅರಣ್ಯ ಇಲಾಖೆಗೆ ಒದಗಿಸಬಹುದು ಎಂದು ತೀರ್ಮಾನ ಕೈಗೊಂಡಿದೆ.

2. ಓದಲಾಗಿರುವ ಕ್ರಮ ಸಂಖ್ಯೆ: (3) ರಲ್ಲಿ ಬಳ್ಳಾರಿ ಜಿಲ್ಲಾಧಿಕಾರಿಗಳು ಕೆಲವು 'ಸಿ' ಮತ್ತು 'ಡಿ' ವರ್ಗದ ಜಮೀನುಗಳ ಪಟ್ಟಿಯನ್ನು ಲಗತ್ತಿಸಿ ಅವುಗಳು ಗಣಿ ಗುತ್ತಿಗೆದಾರರ ಪರವಾಗಿ ಪರಿಹಾರಾತ್ಮಕ ನೆಡುತೋಪು ಬೆಳೆಸುವ ಸಲುವಾಗಿ ಅರಣ್ಯ ಇಲಾಖೆಗೆ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದ್ದು ದಿನಾಂಕ 20-7-94 ರ ಸರ್ಕಾರದ ಆದೇಶದಲ್ಲಿ ಸದರಿ ಸರ್ವೆ ನಂಬರಿನ ಜಮೀನುಗಳು ಸೇರಿರುವುದಿಲ್ಲವೆಂದು ತಿಳಿಸಿ, ಅವುಗಳನ್ನು ಲ್ಯಾಂಡ ಬ್ಯಾಂಕಿಗೆ ಜಮಾ ಮಾಡಿಕೊಳ್ಳಲು ಸರ್ಕಾರದ ಆದೇಶ ಹೊರಡಿಸಬೇಕೆಂದು ಕೋರಿರುತ್ತಾರೆ.

**ಸರ್ಕಾರಿ ಆದೇಶ ಸಂಖ್ಯೆ: ಆರಡಿ 106 ಎಲ್‌ಜಿಪಿ 88, ಬೆಂಗಳೂರು, ದಿನಾಂಕ 27-1-1995.**

ಜಿಲ್ಲಾಧಿಕಾರಿಗಳು, ಬಳ್ಳಾರಿಯವರ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಈ ಆದೇಶಕ್ಕೆ ಲಗತ್ತಿಸಿರುವ ಅನುಬಂಧದಲ್ಲಿ ನೀಡಲಾಗಿರುವ ಒಟ್ಟು 2145-81 ಹೆಕ್ಟೇರು ವಿಸ್ತೀರ್ಣದ ಜಮೀನುಗಳನ್ನು ಅರಣ್ಯ ಇಲಾಖೆಗೆ ಲ್ಯಾಂಡ ಬ್ಯಾಂಕ ನಿರ್ಮಿಸುವ

for The Sandur Manganese & Iron Ores Limited
Md. Abdul Saleem
Vice President (Mines)

ಸಲುವಾಗಿ ವರ್ಗಾವಣೆ ಮಾಡಲು ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಅನುಮತಿ ನೀಡಲಾಗಿದೆ.

1. ಸಾರ್ವಜನಿಕ ಉದ್ದೇಶಕ್ಕೆ ಹಾಗೂ ಸರ್ಕಾರಕ್ಕೆ ಜಮೀನು ಅವಶ್ಯವಿದ್ದಲ್ಲಿ ಕಂದಾಯ ಇಲಾಖೆಯು ಈ ಲ್ಯಾಂಡ್ ಬ್ಯಾಂಕಿನಿಂದ ಜಮೀನನ್ನು ವಾಪಸ ತೆಗೆದುಕೊಳ್ಳಬಹುದಾಗಿದೆ.

2. ವರ್ಗಾವಣೆಯಾದ ಜಮೀನುಗಳನ್ನು 'ಸಿ' ಮತ್ತು 'ಡಿ' ವರ್ಗದ ಜಮೀನುಗಳಾಗಿ ಮುಂದುವರಿಸಬೇಕಾಗಿದ್ದು, ಇವುಗಳನ್ನು ಅರಣ್ಯ ಕಾಯಿದೆಯಡಿ "ಕಾಯ್ದಿರಿಸಿದ ಅರಣ್ಯ" ಎಂಬುದಾಗಿ ಯಾವುದೇ ಅಧಿಸೂಚನೆಯನ್ನು ಹೊರಡಿಸಬಾರದು.

3. ಅರಣ್ಯ ಇಲಾಖೆಯಿಂದ ಗಣಿಗಾರಿಕೆ ಚಟುವಟಿಕೆಗಳಿಗಾಗಿ ಅರಣ್ಯ ಪ್ರದೇಶಗಳನ್ನು ಬಿಡುಗಡೆ ಮಾಡಿದಂತಹ ಸಂದರ್ಭಗಳಲ್ಲಿ ಅದಕ್ಕೆ ಪರ್ಯಾಯವಾಗಿ ಅರಣ್ಯ ಇಲಾಖೆಯ ವತಿಯಿಂದ ಪರಿಹಾರಾತ್ಮಕ ನೆಡುತೋಪು ಬೆಳೆಸುವುದಕ್ಕಾಗಿ 'ಸಿ' ಮತ್ತು 'ಡಿ' ವರ್ಗದ ಜಮೀನುಗಳನ್ನು ಲ್ಯಾಂಡ್ ಬ್ಯಾಂಕಿನಿಂದ ಬಿಡುಗಡೆ ಮಾಡಿ ಅರಣ್ಯ ಇಲಾಖೆಗೆ ಒದಗಿಸಬಹುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

27/1/95

( ಹೆಚ್.ಸಿ. ಜಯಣ್ಣ )
ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ

ಇವರಿಗೆ,

ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಇವರಿಗೆ ಇಂದಿನ ಅಸಾಧಾರಣ ರಾಜ್ಯಪತ್ರದಲ್ಲಿ ಪ್ರಕಟಿಸಿ ಅದರ 200 ಪ್ರತಿಗಳನ್ನು ಕಂದಾಯ ಇಲಾಖೆ, ಭೂಮಂಜೂರಾತಿ ಶಾಖೆ ಕೊಠಡಿ ಸಂಖ್ಯೆ:527, 6ನೇ ಮಹಡಿ, ಬಹುಮಹಡಿ ಕಟ್ಟಡ, ಬೆಂಗಳೂರು ಇವರಿಗೆ ಕಳುಹಿಸಲು ಕೋರಿದೆ.

ಪ್ರತಿಯನ್ನು:

1) ಮುಖ್ಯ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
2) ಮುಖ್ಯ ಮಂತ್ರಿಯವರ ಕಾರ್ಯದರ್ಶಿಗಳು, ಬೆಂಗಳೂರು.
3) ಕಂದಾಯ ಮಂತ್ರಿಯವರ ಆಪ್ತ ಕಾರ್ಯದರ್ಶಿಗಳು,
4) ಅರಣ್ಯ ಮಂತ್ರಿಯವರ ಆಪ್ತ ಕಾರ್ಯದರ್ಶಿಗಳು.
5) ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು,
6) ಕಾರ್ಯದರ್ಶಿಗಳು, ಅರಣ್ಯ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
7) ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು, ಅರಣ್ಯ ಭವನ, ಮಲ್ಲೇಶ್ವರಂ ಬೆಂಗಳೂರು.
8) ವಿಭಾಗಾಧಿಕಾರಿಗಳು ಗುಲ್ಬರ್ಗ : ಜಿಲ್ಲಾಧಿಕಾರಿಗಳು, ಬಳ್ಳಾರಿ
ಎಲ್ಲಾ ಉಪ ವಿಭಾಗಾಧಿಕಾರಿಗಳು,
ಎಲ್ಲಾ ತಹಸೀಲ್ದಾರರುಗಳು ಬಳ್ಳಾರಿ ಜಿಲ್ಲೆ.

for The Sandur Manganese & Iron Ores Limited

Md. Abdul Saleem
Vice President (Mines)

# ಅನುಬಂಧ

| ಕ್ರಮ ಸಂಖ್ಯೆ | ತಾಲ್ಲೂಕಿನ ಹೆಸರು | ಗ್ರಾಮ ಸರ್ವೆ ನಂ. | | ವಿಸ್ತೀರ್ಣ ಹೆಕ್ಟೇರುಗಳಲ್ಲಿ |
|---|---|---|---|---|
| 1. | ಸಿರಗುಪ್ಪ | ನಡವಿ ಗ್ರಾಮ | 397(ಪಿ) | 8-00 |
| 2. | ಸಿರಗುಪ್ಪ | ನಡವಿ ಗ್ರಾಮ | 397(ಪಿ) | 32-55 |
| 3. | ಸಿರಗುಪ್ಪ | ನಡವಿ ಗ್ರಾಮ | 397(ಪಿ) | 30-00 |
| 4. | ಸಿರಗುಪ್ಪ | ನಡವಿ ಗ್ರಾಮ | 397(ಪಿ) | 2-00 |
| 5. | ಸಿರಗುಪ್ಪ | ನಡವಿ ಗ್ರಾಮ | 397(ಪಿ) | 10-00 |
| 6. | ಬಳ್ಳಾರಿ | ಹರಗಿನ ದೋಣಿ | 276(ಪಿ) | 16-01 |
| 7. | ಬಳ್ಳಾರಿ | ಹರಗಿನ ದೋಣಿ | 276(ಪಿ) | 51-00 |
| 8. | ಬಳ್ಳಾರಿ | ಹರಗಿನ ದೋಣಿ | 276(ಪಿ) | 51-02 |
| 9. | ಬಳ್ಳಾರಿ | ಹರಗಿನ ದೋಣಿ | 198 | 19-29 |
| 10. | ಬಳ್ಳಾರಿ | ಕುಡಿತಿನಿ | 1256 | 40-74 |
| 11. | ಬಳ್ಳಾರಿ | ಕುಡಿತಿನಿ | 1251 | 371-56 |
| 12. | ಬಳ್ಳಾರಿ | ಜನಕುಂಟ | 326 | 155-28 |
| 13. | ಸಂಡೂರು | ಐದ್ರಯ್ಯನಹಳ್ಳಿ | 435(ಪಿ) | 104-50 |
| 14) | ಸಂಡೂರು | ಚೋರನೂರು | 961 | 8-01 |
| 15. | ಸಂಡೂರು | ಅಪ್ಪಳಪುರ | 127 | 30-09 |
| 16. | ಸಂಡೂರು | ಅಪ್ಪಳಪುರ | 127 | 27-00 |
| 17. | ಸಂಡೂರು | ಅಪ್ಪಳಪುರ | 1 | 171-25 |
| 18. | ಸಂಡೂರು | ತುಮಟಿ | 3(ಪಿ) | 01-36 |
| 19. | ಸಂಡೂರು | ತುಮಟಿ | 106ಬಿ(ಪಿ) | 28-73 |
| 20. | ಸಂಡೂರು | ತುಮಟಿ | 106ಸಿ(ಪಿ) | 9-34 |
| 21. | ಸಂಡೂರು | ತುಮಟಿ | 106ಡಿ(ಪಿ) | 37-61 |
| 22.: | ಸಂಡೂರು | ತುಮಟಿ | 106ಇ(ಪಿ) | 65-19 |
| 23. | ಸಂಡೂರು | ಬನ್ನಿಹಟ್ಟಿ | 224(ಪಿ) | 90-41 |
| 24. | ಸಂಡೂರು | ವಡ್ಡು | 66:1(ಪಿ) | 108-36 |
| 25. | ಸಂಡೂರು | ತೋರಣಗಲ್ಲು | 519 ಪೈಕಿ | 22-29 |
| 26. | ಸಂಡೂರು | ಕುರುಬನಹಳ್ಳಿ | 1 ಪೈಕಿ | 181-29 |
| 27. | ಸಂಡೂರು | ಚಕ್ಕಂತಪುರ | 1 ಪೈಕಿ | 248-67 |
| 28. | ನಂಡೂರು | ಚಕ್ಕಂತಪುರ | 2 ಪೈಕಿ | 87-73 |
| 29. | ನಂಡೂರು | ಚಕ್ಕಂತಪುರ | 97 ಪೈಕಿ | 45-73 |
| | | ಒಟ್ಟು | | 2145-81 |

for The Sandur Manganese & Iron Ores Limited

Md. Abdul Saleem
Vice President (Mines)